**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 35/2024**

**ಸಾಕ್ಷಿಯನ್ನು ದಿಃ 06.10.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ನಾಗಲಿಂಗಸ್ವಾಮಿ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಮರಿಸ್ವಾಮಪ್ಪ | | |
| ವಯಸ್ಸು | 43 ವರ್ಷ | | |
| ಕೆಲಸ | ಅಬಕಾರಿ ನಿರೀಕ್ಷಕ, ಅಬಕಾರಿ ಉಪಾಧಿಕ್ಷಕರ ಕಚೇರಿ, ಹುಣಸೂರು. | | |
| ವಾಸಸ್ಥಳ | ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 02.12.2024 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಉಪಅಧೀಕ್ಷಕರ ಕಚೇರಿ ಹುಣಸೂರು ಉಪವಿಭಾಗ ಹುಣಸೂರಿನಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2023ರ ವಿಧಾನ ಸಭಾ ಚುನಾವಣೆಯ ಸಂಬಂಧ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ದಿಃ 01.05.2023 ರಂದು ಹುಣಸೂರು–ಕೆ.ಆರ್ ನಗರ ಮುಖ್ಯ ರಸ್ತೆಯಲ್ಲಿ ಹುಣಸೂರು ಪಟ್ಟಣ ಪೋಲಿಸ್ ಠಾಣೆಯ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವ ಬೋರ್ಡ್ ಮುಂಭಾಗ ರಾತ್ರಿ 9.20ಕ್ಕೆ ಸಿಬ್ಬಂದಿಗಳಾದ ಚಾಸಾ–3 ಮತ್ತು 4 ರವರೊಂದಿಗೆ ರಸ್ತೆಗಾವಲು ನಡೆಸುತ್ತಿದ್ದಾಗ, ರಾತ್ರಿ 9–30 ಕ್ಕೆ ಹುಣಸೂರು ಪಟ್ಟಣದ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿತ್ತು. ಸದರಿ ವಾಹನಕ್ಕೆ ಕೈ ತೋರಿಸಿ ನಿಲ್ಲಿಸುವಂತೆ ಸೂಚಿಸಲಾಗಿ ಅದರ ಸವಾರ ವಾಹನವನ್ನು ನಿಲ್ಲಿಸಿದ. ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ಸವಾರನನ್ನು ಕೇಳಲಾಗಿ, ಆತನು ಯಾವುದೇ ಉತ್ತರವನ್ನು ನೀಡದೇ ತಡವರಿಸಿದ. ನಮಗೆ

ಅನುಮಾನ ಬಂದು ಸದರಿ ಪ್ಲಾಸ್ಟಿಕ್ ಚೀಲವನ್ನು ಹಾಗೂ ವಾಹನವನ್ನು ಶೋಧನೆ ಮಾಡಲು ಅದೇ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಅವರಿಗೆ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಲಾಗಿ ಅವರಿಬ್ಬರು ಒಪ್ಪಿ ಮುಂದೆ ಬಂದರು. ಅವರಿಗೆ ನೋಟಿಸ್ ನೀಡಿ ಸಹಿ ಪಡೆದುಕೊಂಡೆನು. ಅವರಿಬ್ಬರ ಹೆಸರು ಸುರೇಶ್ ಬಿನ್ ಕರೀಗೌಡ ಮತ್ತು ಮಹದೇವೆಗೌಡ ಬಿನ್ ರಾಜೇಗೌಡ ಆಗಿದೆ. ನಂತರ ಸದರಿ ವಾಹನವನ್ನು ಶೋಧನೆ ನಡೆಸಲು ನಂತರ ನ್ಯಾಯಾಲಯದಿಂದ ಶೋಧನಾ ವಾರಂಟನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯಿದೆ ಕಲಂ 54ರಡಿಯಲ್ಲಿ ಕಾರಣಗಳನ್ನು ನಮೂದಿಸಿ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಅದಕ್ಕೆ ನಾನು ಮತ್ತು ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಕಂಡು ಬಂದವು. ಅವುಗಳನ್ನು ನೆಲದ ಮೇಲೆ ಸುರಿದು ಎಣಿಕೆ ಮಾಡಲಾಗಿ ಅವುಗಳ ಮೇಲೆ ಅಬಕಾರಿ ಭದ್ರತಾ ಚೀಟಿ ಸಂಖ್ಯೆಗಳು ಕಂಡು ಬರಲಿಲ್ಲ. ತಲಾ 90 ಎಮ್.ಎಲ್ ನ ಒಟ್ಟು 50 ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕ್ ಗಳು ಇದ್ದವು. ಅವುಗಳಲ್ಲಿ ಒಟ್ಟು 4.500 ಲೀಟರ್ ಮದ್ಯ ಇತ್ತು. ನಂತರ ವಾಹನವನ್ನು ಪರಶೀಲಿಸಲಾಗಿ ಕಪ್ಪು ಮತ್ತು ನೀಲಿ ಬಣ್ಣ ಮಿಶ್ರಿತ ಹಿರೋಹೋಂಡಾ ಸ್ಪೆಂಡರ್ ಪ್ಲಸ್ ನೋಂದಣಿ ಸಂಃ ಕೆ.ಎ-45-ಹೆಚ್-8410 ಆಗಿತ್ತು. ಈ ಬಗ್ಗೆ ಸದರಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಲು ಯಾವುವುದಾದರೂ ಲೈಸೆನ್ಸ್ ರಹದಾರಿ ವಗೈರೆ ಇದೆಯೇ ಎಂದು ಕೇಳಲಾಗಿ ಯಾವುದು ಇಲ್ಲ ಎಂದು ತಿಳಿಸಿದ. ಆತನ ಹೆಸರು ವಿಳಾಸ ಕೇಳಲಾಗಿ ಸತೀಶ್ ಬಿನ್ ಸ್ವಾಮಿಗೌಡ, 36 ವರ್ಷ, ಮೈಲಾಂಬೂರು ಗ್ರಾಮ, ಹುಣಸೂರು ತಾಲ್ಲೂಕು ವಾಸಿ ಎಂದು ತಿಳಿಸಿದ. ಮದ್ಯವನ್ನು ಅಕ್ರಮವಾಗಿ ಹೊಂದಿರುವುದು ಅಬಕಾರಿಕಾಯಿದೆಯ ಉಲ್ಲಂಘನೆ ಎಂದು ಆತನಿಗೆ ತಿಳಿದು, ಸ್ಥಳದಲ್ಲಿಯೇ ಆತನಿಗೆ ನೋಟಿಸ್ ಜಾರಿ ಮಾಡಿದೆನು. ನಂತರ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ವಶಕ್ಕೆ ಪಡೆದುಕೊಂಡು ಆ ಪೈಕಿ 30 ಓರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ದಾರನಿಂದ ಕಟ್ಟಿ ಅರಗಿನಿಂದ 310

ಎಂದು ಸೀಲು ಮಾಡಲಾಯಿತು. ಈ ಬಗ್ಗೆ ಸ್ಥಳದಲ್ಲಿ ರಾತ್ರಿ 9-30 ರಿಂದ 11-00 ಗಂಟೆಯವರೆಗೆ ಮಹಜರು ಕ್ರಮವನ್ನು ಜರುಗಿಸಿದೆನು. ಆರೋಪಿಯನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆನು. ಆತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಪಂಚನಾಮೆಗೆ ನಾನು, ಚಾಸಾ-1 ರಿಂದ 4 ರವರು ಸಹಿ ಮಾಡಿದ್ದೇವೆ. ಸಾಕ್ಷಿ ನಿಪಿ-1ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆ ದಿನ ಮಾದರಿಗಾಗಿ ಸಂಗ್ರಹಿಸಿದ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-1 ನ್ನು ನೋಡಿ ಗುರುತಿಸುತ್ತಾರೆ. ಸ್ಥಳದಲ್ಲಿ ತಯಾರಿಸಿದ ಶೋಧನಾ ಸಮುಚಿತ ಆಧಾರವನ್ನು ಈಗ ನೋಡುತ್ತಿದ್ದು ಈಗಾಗಲೆ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3ರ ಮಾದರಿ ಸೀಲಿನ ನಕಲಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ದಂಡ ಪ್ರಕ್ರಿಯಾ ಸಂಹಿತೆ ಕಲಂ 41(ಎ) ರಡಿಯಲ್ಲಿ ನೀಡಿದ ನೋಟಿಸನ್ನು ಈಗ ನೋಡುತ್ತಿದ್ದು, ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಂತರ ಕಚೇರಿಗೆ ವಾಪಸ್ಸಾಗಿ ನನ್ನ ಸ್ವ ದೂರಿನ ಮೇರೆಗೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಕ್ಕೆ ಸಲ್ಲಿಸಿರುತ್ತೇನೆ. ಸ್ವ ದೂರನ್ನು ಈಗ ನೋಡುತ್ತಿದ್ದು, ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಪ್ರ.ವ.ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-8 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಿಳಿ ಬಣ್ಣದ ಚೀಲವನ್ನು ಈಗ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-2 ಎಂದು ಗುರುತಿಸಲಾಯಿತು. ನನ್ನ ತನಿಖೆಯ ಸಮಯದಲ್ಲಿ ಮಾದರಿಗಾಗಿ ಸಂಗ್ರಹಿಸಿ ಉಳಿದ ಮುದ್ದೆ ಮಾಲನ್ನು ಇಲಾಖೆಯ ವಶದಲ್ಲಿ ಇಟ್ಟುಕೊಳ್ಳಲು ಅನುಮತಿ ಕೋರಿ ಪ್ರಾಧಿಕೃತ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದು ಅವರಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-10 ಎಂದು, ಸಾಕ್ಷಿಯ

ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿದ ಆರೋಪಿಗೆ ಸೇರಿದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 4 ಭಾವಚಿತ್ರಗಳಲ್ಲಿ ವಾಹನವನ್ನು ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ನಿಪಿ-11 ಎಂದು ಅದಕ್ಕೆ ಸಂಬಂಧಿಸಿದ ಸಿಡಿಯನ್ನು ನಿಪಿ-12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. BRL ವಕೀಲರಿಂದಃ**

ದಿಃ 01.05.2023 ರಂದು ನಾನು ಕಚೇರಿಯಲ್ಲಿ ದಿನದ 24 ಗಂಟೆ ಕರ್ತವ್ಯ ನಿರ್ವಹಿಸಿದ್ದೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ನ್ಯಾಯಾಲಯ ಆದೇಶ ಮಾಡಿದರೆ ಹಾಜರುಪಡಿಸುತ್ತೇನೆ. ನಮ್ಮ ಇಲಾಖೆಯಿಂದ ಯಾವುದೇ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಅಂತಿಮ ವರದಿಯನ್ನು ಸಲ್ಲಿಸಿದರೇ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಲಾಗುತ್ತದೆ ಎಂದರೆ ಸರಿ. ಆ ದಿನ ಸಂಜೆ 6 ರಿಂದ 8 ಗಂಟೆಯವರೆಗೆ ಎಲ್ಲಿ ಗಸ್ತು ಮಾಡಿದ್ದಿರಿ ಎಂದರೆ ಹುಣಸೂರು ಪಟ್ಟಣದಲ್ಲಿ ಗಸ್ತು ಮಾಡಿದ್ದೇವೆ. ಹುಣಸೂರು ಪಟ್ಟಣದ ಯಾವ ಯಾವ ಜಾಗಗಳಲ್ಲಿ ನಿಖರವಾಗಿ ಗಸ್ತು ಮಾಡಿದ್ದಿರಿ ಎಂದು ಹೇಳಲಾಗುತ್ತದೆಯೇ ಎಂದರೆ ಮುಖ್ಯ ರಸ್ತೆಗಳಲ್ಲಿ ಗಸ್ತು ಮಾಡಿದ್ದೇವೆ. ಘಟನಾ ಸ್ಥಳಕ್ಕೆ ರಾತ್ರಿ 9.20ಕ್ಕೆ ಹೋಗಿದ್ದೇವೆ. ಅದಕ್ಕೂ ಮೊದಲು ಎಲ್ಲಿ ಗಸ್ತು ಮಾಡಿದ್ದಿರಿ ಎಂದರೆ ರಾತ್ರಿ 9 ಗಂಟೆಗೆ ಕಚೇರಿಯಿಂದ ಹೊರಟಿದ್ದೆವು. ನಿಮ್ಮ ಕಚೇರಿಯಿಂದ ಘಟನಾ ಸ್ಥಳಕ್ಕೆ ಹೋಗಲು ಎಷ್ಟು ಸಮಯ ಬೇಕು ಎಂದರೆ 2 ಕಿ.ಮೀ ದೂರ ಇರುವ ಕಾರಣ ಕೇವಲ 10 ನಿಮಿಷ ಸಾಕು. ಸಾಕ್ಷಿ ಮುಂದುವರಿದು ಗಸ್ತು ಮಾಡುತ್ತಾ ಹೋಗಿರುವುದರಿಂದ 20 ನಿಮಿಷ ಬೇಕಾಗಿತ್ತು. ಈ ವಿಷಯವನ್ನು ದೂರಿನಲ್ಲಿ ಹೇಳಿದ್ದಿರಾ ಎಂದರೆ ಇಲ್ಲ ಮಹಜರಿನಲ್ಲಿ ಬರೆದಿದ್ದೇನೆ. ದೂರಿನಲ್ಲಿ ಬರೆಯಲು ತೊಂದರೆ ಇರಲಿಲ್ಲ.

ಆ ದಿನ ನನ್ನ ಜೊತೆ ಇಬ್ಬರು ಸಿಬ್ಬಂದಿಗಳು ಇದ್ದರು. ನಾವು ಆ ದಿನ ಸರ್ಕಾರಿ ವಾಹನದಲ್ಲಿ ಹೋಗಿದ್ದೆವು. ಅದನ್ನು ಚಾಸಾ-4 ರವರು ಚಲಾಯಿಸುತ್ತಿದ್ದರು. ಆ ದಿನ ಘಟನಾ ಸ್ಥಳದಲ್ಲಿ ಆರೋಪಿಯಿಂದ ಮುದ್ದೆ ಮಾಲನ್ನು ವಶಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಕಚೇರಿಯಲ್ಲಿ ನಾನು ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿಯ ವಾಹನವನ್ನು ಚಾಸಾ-3 ರವರು

ತಡೆದು ನಿಲ್ಲಿಸಿದ್ದಾರೆ. ಈ ವಿಷಯವನ್ನು ಸ್ವ ದೂರು ಮತ್ತು ಮಹಜರಿನಲ್ಲಿ ಬರೆಸಿಲ್ಲ. ಆ ದಿನ ಆರೋಪಿಯಿಂದ ಮುದ್ದೆ ಮಾಲನ್ನು ವಶಪಡಿಸಿಕೊಳ್ಳುವ ಪೂರ್ವದಲ್ಲಿ ಪಂಚರನ್ನು ಕರೆಸಿಕೊಂಡಿದ್ದಿರಾ ಎಂದರೆ ಪಂಚರ ಸಮಕ್ಷವೇ ಮುದ್ದೆ ಮಾಲು ಅಮಾನತ್ತುಪಡಿಸಿಕೊಂಡಿದ್ದೇನೆ. ಆ ದಿನ ನಾವು ಪಂಚರನ್ನು ಕರೆಸಿಕೊಂಡಿಲ್ಲ ಮತ್ತು ಪರಸ್ಪರ ಅಂಗಶೋಧನೆ ಮಾಡದೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯಿಂದ ಟೆಟ್ರಾ ಪ್ಯಾಕೇಟ್ ಗಳನ್ನು ವಶಪಡಿಸಿಕೊಂಡಿದ್ದೇನೆ. ನಾನು ಮೊದಲು ಸ್ಥಳದಲ್ಲಿ ಮುದ್ದೆ ಮಾಲನ್ನು ಜಪ್ತು ಮಾಡಿಕೊಂಡು ಮಹಜರು ಮಾಡಿ ನಂತರ ಸ್ವ ದೂರನ್ನು ದಾಖಲಿಸಿದ್ದೇನೆ. ನಾನು ಆ ದಿನ ಆರೋಪಿಯಿಂದ ಮುದ್ದೆ ಮಾಲು ಜಪ್ತು ಮಾಡಿಕೊಂಡಿದ್ದೇನೆ ಎನ್ನುವ ಪೂರ್ವದಲ್ಲಿ ಹಲವಾರು ಪ್ರಕರಣಗಳನ್ನು ದಾಖಲಿಸಿ ತನಿಖೆ ಮಾಡಿ ಸ್ಥಳಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನನ್ನ ಸಮಕ್ಷಮ ಸ್ಥಳ ಮಹಜರು ಮಾಡಲಾಗಿದೆ. ಸ್ಥಳ ಮಹಜರನ್ನು ಚಾಸಾ-3 ಬರೆದಿದ್ದಾರೆ. ಸ್ಥಳದಲ್ಲಿ ನಾನು ಮತ್ತು ನನ್ನ ಸಿಬ್ಬಂದಿ ಸ್ಥಳ ಮಹಜರು ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೃತ್ಯ ಎಸಗದೇ ಇದ್ದರೂ ಕೂಡ ನಮ್ಮ ಇಲಾಖೆಯ ಅಂಕಿ ಅಂಶಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.